KACD420014942020

HANUMANTHARAYAPPA B R
Digitally signed by HANUMANTHARAYAPPA B R
Date: 2026.06.22 17:03:09 +0530

Presented on : 15-10-2020
Registered on : 15-10-2020
Decided on : 20-06-2026
Duration : 5 years, 8 months, 5 days

# ಅಪರ ಸಿವಿಲ್ ನ್ಯಾಯಾಧೀಶರು ಮತ್ತು
# ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ,

**ಉಪಸ್ಥಿತರುಃ–** ಹನುಮಂತರಾಯಪ್ಪ. ಬಿ.ಆರ್.
ಬಿ.ಎ. ಎಲ್ ಎಲ್ ಬಿ.,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಹೊಳಲ್ಕೆರೆ.

**ದಿನಾಂಕಃ 20 ನೇ ಜೂನ್ 2026**

**ಅಪರಾಧಿಕ ಪ್ರಕರಣ ಸಂ.1038/2020**

**ಫಿರ್ಯಾದಿದಾರರುಃ –** ಸರ್ಕಾರದ ಪರವಾಗಿ ,
ಹೊಳಲ್ಕೆರೆ ಪೊಲೀಸರು
(**ಸಹಾಯಕ ಸರ್ಕಾರಿ ಅಭಿಯೋಜಕರು**)

**– ವಿರುದ್ಧ –**

ಆರೋಪಿತರು **:**

1. ಪರಮೇಶ್ವರಪ್ಪ ತಂದೆ ಬಸಪ್ಪ
ವಯಸ್ಸು : 34 ವರ್ಷ
2. ಭಾಗ್ಯಮ್ಮ ತಂದೆ ತಿಪ್ಪೇಶಪ್ಪ
38 ವರ್ಷ
3. ಗೀತಮ್ಮ ಕೋಂ ಪರಮೇಶ್ವರಪ್ಪ
28 ವರ್ಷ,
4. ನಿಜಲಿಂಗಪ್ಪ ತಂದೆ ರಾಮಪ್ಪ

60 ವರ್ಷ

5. ಮರುಳಪ್ಪ ತಂದೆ ರಾಮಪ್ಪ
50 ವರ್ಷ

6. ಕುಮಾರಿ @ ಮೋಹನ ಕುಮಾರಿ
22 ವರ್ಷ
ಎಲ್ಲರೂ ವಾಸಃ ಬಿದರಕೆರೆ ಗ್ರಾಮ
ಹೊಳಲ್ಕೆರೆ ತಾಲ್ಲೂಕು.
(ಆರೋಪಿತರ ಪರ ಶ್ರೀ.ಆರ್.ಎಸ್. ವಕೀಲರು)

| | |
|---|---|
| ಅಪರಾಧ ಸಂಭವಿಸಿದ ದಿನಾಂಕ | 05/08/2012 |
| ಅಪರಾಧ ವರದಿಯಾದ ದಿನಾಂಕ | 06/08/2012 |
| ಪಿರ್ಯಾದುದಾರರ ಹೆಸರು | ದೇವೇಂದ್ರಪ್ಪ ತಂದೆ ಲೇಟ್ ಬಸಪ್ಪ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 05/10/2021 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 10/04/2026 |
| ಅರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 143,147,148,504,323,324,506 ಸಹಕಲಂ 149 |
| ನ್ಯಾಯಾಧೀಶರ ತೀರ್ಮಾನ | ನಿರ್ದೋಷಿಗಳು ಎಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 20/06/2026 |

| | | | |
|---|---|---|---|
| ಒಟ್ಟು ಸಮಯ | ವರ್ಷ | ತಿಂಗಳುಗಳು | ದಿನಗಳು |
| | 05 | 08 | 05 |

(ಹನುಮಂತರಾಯಪ್ಪ. ಬಿ.ಆರ್ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹೊಳಲ್ಕೆರೆ.

:ತೀರ್ಪು:

ಆರಕ್ಷಕ ಉಪ ನಿರೀಕ್ಷಕರು, ಹೊಳಲ್ಕೆರೆ ಪೋಲೀಸ್ ಠಾಣೆಯವರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ 143, 147, 148, 323, 324, 504, 506, ಸಹಕಲಂ 149 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

**ಅಭಿಯೋಜನೆಯ ಪ್ರಕರಣದ ಸಾರಾಂಶ ಏನೆಂದರೆ:-**

2. ಹೊಳಲ್ಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಿದರಕೆರೆ ಗ್ರಾಮದಲ್ಲಿ ದಿನಾಂಕ 05/08/2012 ರಂದು ರಾತ್ರಿ 8-15 ಗಂಟೆ ಸಮಯದಲ್ಲಿ ದೋಷಾ ಸಾಕ್ಷಿ-1 ರವರು ತಮ್ಮ ಮನೆಯ ಮುಂದೆ ದೋಷಾ ಸಾಕ್ಷಿ-5 ರವರೊಂದಿಗೆ ತನ್ನ ಮನೆಗೆ ನೀರಿನ ನಲ್ಲಿ ಹಾಕಿಸಿಕೊಳ್ಳಲು ಪೈಪ್ ಲೈನ್ ಹಾಕಿಕೊಳ್ಳುತ್ತಿರುವಾಗ ಆರೋಪಿತರು ಆಸ್ತಿಯ ವಿಚಾರದಲ್ಲಿ ಹಳೆಯ ವೈಷಮ್ಯದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೋಷಾ ಸಾಕ್ಷಿ-1 ರವರನ್ನು ಉದ್ದೇಶಿಸಿ ಸೂಳೇ ಮಗನೇ, ಬೋಳಿ ಮಗನೇ ಎಂದು ಅವ್ಯಾಚ ಶಬ್ದಗಳಿಂದ ಬೈದಾಡಿ 1 ನೇ ಆರೋಪಿಯು ಕುಡುಗೋಲಿನಿಂದ ದೋಷಾ ಸಾಕ್ಷಿ-1 ರವರ ತಲೆಗೆ ಹೊಡೆದಿದ್ದು ಬಿಡಿಸಲು ಹೋಗದ ದೋಷಾ ಸಾಕ್ಷಿ-4 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದಿದ್ದು, ಅವರನ್ನು ಬಿಡಿಸಲು ಹೋದ ದೋಷಾ ಸಾಕ್ಷಿ-2 ಮತ್ತು 3 ರವರಿಗೆ ಎಲ್ಲಾ ಆರೋಪಿತರು ಸೇರಿ ಕೈ ಕಾಲಗಳಿಂದ ಮೈಕೈಗೆ ಹೊಡೆದು ದೋಷಾ ಸಾಕ್ಷಿ-3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ ಎಲ್ಲಾ ಆರೋಪಿತರು ಸೇರಿ ದೋಷಾ ಸಾಕ್ಷಿ-1 ರಿಂದ 4 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ತನಿಖೆಯಿಂದ ದೃಢಪಟ್ಟಿರುತ್ತದೆ ಎಂದು ಆ ಪ್ರಕಾರ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.43, 147, 148, 323, 324, 504, 506 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

3. ಈ ನ್ಯಾಯಾಲಯವು ಆರೋಪ ಪಟ್ಟಿಯಲ್ಲಿನ ಆರೋಪವನ್ನು ಆಧರಿಸಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿ-1 ರಿಂದ 6 ರವರುಗಳಿಗೆ ಈ ನ್ಯಾಯಾಲಯದಿಂದ

ಸಮನ್ಸ್ ಜಾರಿ ಮಾಡಿದ್ದು, ಆರೋಪಿತರು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರುಗಳಿಗೆ ದೋಷಾರೋಪಣೆ ಪಟ್ಟಿಯ ದಾಖಲೆಗಳನ್ನು ಸಿ.ಆರ್.ಪಿ.ಸಿ ಕಲಂ.207 ರ ಅಡಿಯಲ್ಲಿ ಒದಗಿಸಲಾಯಿತು. ಆರೋಪಿತರುಗಳಿಗೆ ಭಾ.ದಂ.ಸಂ. ಕಲಂ 143, 147, 148, 323, 324, 504, 506 ಸಹಕಲಂ 149 ರಡಿಯಲ್ಲಿನ ಅಪರಾಧಗಳ ಬಗ್ಗೆ ಆಪಾದನೆಯ ಸಾರಾಂಶಗಳನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ಆರೋಪಿ 1 ರಿಂದ 6 ರವರುಗಳು ಆರೋಪದ ಎಲ್ಲಾ ಅಂಶಗಳನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಆರೋಪಿತರ ಮೇಲೆ ಆರೋಪಿಸಿರುವ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯ ವಿಚಾರಣೆಯನ್ನು ಆರಂಭಿಸಿದ್ದು ಆರೋಪ ಪಟ್ಟಿಯಲ್ಲಿನ ಒಟ್ಟು 11 ಸಾಕ್ಷಿಗಳ ಪೈಕಿ 9 ಸಾಕ್ಷಿದಾರರುಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ–1 ರಿಂದ 6 ಹಾಗೂ ಚಾಸಾ–8, 10, 11 ರವರನ್ನು ಫ್ರಾಸಾ.1 ರಿಂದ ಫ್ರಾಸಾ–9 ರಂತೆ ಸಾಕ್ಷಿದಾರರುಗಳ ಹೇಳಿಕೆಯನ್ನು ಪಡೆದಿದ್ದು, ನಿಪಿ.1 ರಿಂದ ನಿಪಿ.9 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ಮು.ಮಾ.1 ರಂತೆ ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಿದ ನಂತರ ಆರೋಪಿತರಿಗೆ ಸಿ.ಆರ್.ಪಿ.ಸಿ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆರೋಪಿ–1 ರಿಂದ 6 ರವರುಗಳು ಅಭಿಯೋಜನೆಯ ಎಲ್ಲಾ ಸಾಕ್ಷಿಗಳ ಆಪಾದಿಸುವ ಎಲ್ಲಾ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಗಳನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರ ಯಾವುದೇ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

5. ಅಭಿಯೋಜನೆಯ ಪರ ಸರ್ಕಾರಿ ವಕೀಲರ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು ಹಾಗೂ ಕಡತದಲ್ಲಿರುವ ಎಲ್ಲಾ ಸಾಕ್ಷ್ಯದಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣೆನೆಗೆ ಉದ್ಭವಿಸುತ್ತದೆ.

1. ದಿನಾಂಕಃ05-08-2012 ರಂದು ಬೆಳಿಗ್ಗೆ 8-15 ಗಂಟೆ ಸಮಯದಲ್ಲಿ ಹೊಳಲ್ಕೆರೆ ಪೋಲೀಸ್ ಠಾಣಾ ಸರಹದ್ದಿನ ಬಿದರಕೆರೆ ಗ್ರಾಮದ ದೋ.ಸಾಕ್ಷಿ-1 ರವರು ತಮ್ಮ ಮನೆಯ ಮುಂದೆ ದೋ.ಸಾಕ್ಷಿ-5 ರವರೊಂದಿಗೆ ಮನೆಗೆ ನೀರಿನ ಪೈಪ್ ಲೈನ್ ಹಾಕಿಸಿಕೊಳ್ಳುತ್ತಿರುವಾಗ ಆರೋಪಿತರು ಏಕೋದ್ದೇಶದಿಂದ ಅಕ್ರಮ ಗುಂಪಿನ ಸದಸ್ಯರಾಗಿ ಬಂದಿದ್ದು, ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ.143 ಸಹಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

2. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ದೊಂಬಿ ಮಾಡಿದ್ದು ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ.147 ಸಹಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

3. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ಆಪಾಯಕಾರಿ ಆಯುಧವಾದ ಕುಡುಗೋಲು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ 148 ಸಹಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ

ರುಜುವಾತುಪಡಿಸುವರೇ ?

4. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ದೋ. ಸಾಕ್ಷಿ.1 ರವರಿಗೆ ಸೂಳೇ ಮಗನೇ ಬೋಳಿ ಮಗನೆ ಎಂದು ಅವ್ಯಾಚ ಶಬ್ದಗಳಿಂದ ಬೈದು ಉದ್ದೇಶ ಪೂರ್ವಕವಾಗಿ ಅಪಮಾನ ಮಾಡಿ ಅವರಿಗೆ ಶಾಂತಿ ಭಂಗ ಉಂಟು ಮಾಡುವಂತೆ ಪ್ರಚೋದನೆ ಮಾಡಿದ್ದು ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ.504 ಸಹಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

5. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ಆ ಪೈಕಿ 1 ನೇ ಆರೋಪಿಯು ದೋ.ಸಾಕ್ಷಿ-1 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದಿದ್ದು 1 ರಿಂದ 3 ನೇ ಆರೋಪಿತರು ದೋ. ಸಾಕ್ಷಿ-2 ಮತ್ತು ದೊ ಸಾಕ್ಷಿ-3 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದು ದೋ ಸಾಕ್ಷಿ-1 ರಿಂದ ಸಾಕ್ಷಿ-3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ 323 ಸಹಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

6. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ಆ ಪೈಕಿ 1 ನೇ ಆರೋಪಿಯು ದೋ.ಸಾಕ್ಷಿ-1 ರವರಿಗೆ ಕುಡುಗೋಲಿನಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ 324 ಸಹಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

7. ಅದೇ ದಿನಾಂಕ, ಅದೇ ವೇಳೆ, ಅದೇ ಸ್ಥಳದಲ್ಲಿ ಆರೋಪಿ 1 ರಿಂದ 6 ರವರುಗಳು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಅಕ್ರಮಕೂಟದ ಉದ್ದೇಶದಂತೆ ಬಂದು ದೋ-ಸಾಕ್ಷಿ-1 ರಿಂದ 4 ರವರಿಗೆ ನೀವು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ನಿಮ್ಮಗಳ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಪ್ರಕಾರ ಆರೋಪಿ.1 ರಿಂದ 6 ರವರುಗಳು ಭಾರತ ದಂಡ ಸಂಹಿತೆ ಕಲಂ 506 ಸಹಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?

8. ಯಾವ ಆದೇಶ ?

6. ಮೇಲ್ಕಂಡ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಉತ್ತರಿಸುತ್ತೇನೆ.

ಅಂಶ 1: ನಕಾರಾತ್ಮಕವಾಗಿ
ಅಂಶ 2: ನಕಾರಾತ್ಮಕವಾಗಿ

ಅಂಶ 3: ನಕಾರಾತ್ಮಕವಾಗಿ

ಅಂಶ 4: ನಕಾರಾತ್ಮಕವಾಗಿ

ಅಂಶ 5: ನಕಾರಾತ್ಮಕವಾಗಿ

ಅಂಶ 6: ನಕಾರಾತ್ಮಕವಾಗಿ

ಅಂಶ 7: ನಕಾರಾತ್ಮಕವಾಗಿ

ಅಂಶ 8: ಅಂತಿಮ ಆದೇಶನುಸಾರವಾಗಿ

ಃಃ ಕಾರಣಗಳು ಃಃ

7. **ಅಂಶ 1 ರಿಂದ 7:-** ಈ ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕ ಸಂಗತಿಗಳನ್ನು ಒಳಗೊಂಡಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೂಳ್ಳಲಾಗಿದೆ.

8. ಅಭಿಯೋಜನೆಯ ಪ್ರಕಾರ ಈ ಪ್ರಕರಣವು ಹೊಳಲ್ಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬಿದರಕೆರೆ ಗ್ರಾಮದಲ್ಲಿ ದಿನಾಂಕ 05/08/2012 ರಂದು ರಾತ್ರಿ 8-15 ಗಂಟೆ ಸಮಯದಲ್ಲಿ ದೋಷಾ ಸಾಕ್ಷಿ-1 ರವರು ತಮ್ಮ ಮನೆಯ ಮುಂದೆ ದೋಷಾ ಸಾಕ್ಷಿ-5 ರವರೊಂದಿಗೆ ತನ್ನ ಮನೆಗೆ ನೀರಿನ ನಲ್ಲಿ ಹಾಕಿಸಿಕೊಳ್ಳಲು ಪೈಪ್ ಲೈನ್ ಹಾಕಿಕೊಳ್ಳುತ್ತಿರುವಾಗ ಆರೋಪಿತರು ಆಸ್ತಿಯ ವಿಚಾರದಲ್ಲಿ ಹಳೆಯ ವೈಷಮ್ಯದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೋಷಾ ಸಾಕ್ಷಿ-1 ರವರನ್ನು ಉದ್ದೇಶಿಸಿ ಸೂಳೇ ಮಗನೇ, ಬೋಳಿ ಮಗನೇ ಎಂದು ಅವ್ಯಾಚ ಶಬ್ದಗಳಿಂದ ಬೈದಾಡಿ 1 ನೇ ಆರೋಪಿಯು ಕುಡುಗೋಲಿನಿಂದ ದೋಷಾ ಸಾಕ್ಷಿ-1 ರವರ ತಲೆಗೆ ಹೊಡೆದಿದ್ದು ಬಿಡಿಸಲು ಹೋಗದ ದೋಷಾ ಸಾಕ್ಷಿ-4 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದಿದ್ದು, ಅವರನ್ನು ಬಿಡಿಸಲು ಹೋದ ದೋಷಾ ಸಾಕ್ಷಿ-2 ಮತ್ತು 3 ರವರಿಗೆ

ಎಲ್ಲಾ ಆರೋಪಿತರು ಸೇರಿ ಕೈ ಕಾಲಗಳಿಂದ ಮೈಕೈಗೆ ಹೊಡೆದು ದೋಷಾ ಸಾಕ್ಷಿ-3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ ಎಲ್ಲಾ ಆರೋಪಿತರು ಸೇರಿ ದೋಷಾ ಸಾಕ್ಷಿ-1 ರಿಂದ 4 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ತನಿಖೆಯಿಂದ ದೃಢಪಟ್ಟಿರುತ್ತದೆ ಎಂದು ಆ ಪ್ರಕಾರ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143,147, 148, 323, 324, 504, 506 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

9. ಅಭಿಯೋಜನೆಯವರು ಆರೋಪಿತರ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ.1 ರಿಂದ ಪ್ರಾಸಾ.9 ಎಂಬುದಾಗಿ ಸಾಕ್ಷ್ಯ ನೀಡಿದ್ದು, ನಿಪಿ.1 ರಿಂದ ನಿಪಿ.9 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

10. ಚಾಸಾ.1/ಪ್ರಾಸಾ.1 ರವರಾದ ದೇವೇಂದ್ರಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 05.08.2012 ರಲ್ಲಿ ರಾತ್ರಿ 08.15 ರ ಸಮಯದಲ್ಲಿ ಆರೋಪಿತರು ತಮ್ಮ ಮನೆಯ ಮುಂದೆ ನಲ್ಲಿಯನ್ನು ಕಿತ್ತು ಹಾಕಿದ್ದರು ಅವರ ನಡುವೆ ಆಸ್ತಿಯ ವಿಚಾರದಲ್ಲಿ ತಮಗೆ ಗಲಾಟೆ ಇದ್ದುದ್ದರಿಂದ ಆರೋಪಿತರು ಆ ದ್ವೇಷದಿಂದ ನಮ್ಮ ಮೇಲೆ ಗಲಾಟೆ ಮಾಡಿರುತ್ತಾರೆ. 1 ನೇ ಆರೋಪಿ ತನ್ನ ಬಟ್ಟೆಯನ್ನು ಕಿತ್ತು ಹಾಕಿರುತ್ತಾರೆ. 1 ನೇ ಆರೋಪಿಯು ಕುಡುಗೋಲಿನಿಂದ ತನ್ನ ತಲೆಗೆ ಹೊಡೆದಿರುತ್ತಾನೆ, ಚಾಸಾ-4 ಬಿಡಿಸಲು ಬಂದಾಗ ಅವರಿಗೂ ಸಹಾ ಅವರ ಬೆನ್ನಿಗೆ ಹೊಡೆದಿರುತ್ತಾರೆ.ತನಗೆ ಪ್ರಜ್ಞೆ ಹೋಗಿರುತ್ತದೆ. ಚಾಸಾ-2 ರಿಂದ 4 ತನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ ತನಗೆ ಪ್ರಜ್ಞೆ

ಇರುವುದಿಲ್ಲ ಆಸ್ಪತ್ರೆಯಲ್ಲಿ ತಾನು ಚಿಕಿತ್ಸೆ ಪಡೆದಿರುತ್ತೇನೆ ಆಸ್ಪತ್ರೆಯಲ್ಲಿ ಪೋಲೀಸರು ಬಂದು ದೂರು ಬರೆದುಕೊಂಡಿರುತ್ತಾರೆ, ದಿನಾಂಕ 06-08-2012 ರ ಹೇಳಿಕೆ ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ರ ದೂರನ್ನು ತಾನು ದಿನಾಂಕ 06-08-2012 ರ ಬೆಳಿಗ್ಗೆ 7-00 ಗಂಟೆಗೆ ನೀಡಿರುತ್ತೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ. ತಮ್ಮ ವಿಚಾರಣೆ ವೇಳೆ ನಿಪಿ-1 ರ ದೂರನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ.

11. ಫ್ರಾಸಾ-1 ರವರು ತಮ್ಮ ವಿಚಾರಣೆ ವೇಳೆ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿದ್ದು, ಅಭಿಯೋಜಕರ ಪಾಟೀ ಸವಾಲಿನಲ್ಲಿ ಆರೋಪಿತರು ಗಲಾಟೆಯಲ್ಲಿ ನನಗೆ ಅವ್ಯಾಚ ಶಬ್ದಗಳಿಂದ ಬೈದಿರುತ್ತಾರೆ ಎಂದು ಸರಿ ಎಂದು ಒಪ್ಪಿಕೊಂಡಿರುತ್ತಾರೆ ಹಾಗೂ ನಿಪಿ-1 ದೂರನ್ನು ನೋಡಿ 2 ನೇ ಆರೋಪಿಯು ಚಾಸಾ-3 ರವರ ಮಾಂಗಲ್ಯ ಸರವನ್ನು ಹಿಡಿದು ಎಳೆದಾಗ ಅದು ಎಲ್ಲೋ ಬಿದ್ದು ಹೋಗಿರುತ್ತದೆಂದು ತಿಳಿಸಿದ್ದೇನು ಎಂದರೆ ಸರಿ, ನಿಪಿ-1(ಎ) ಹೇಳಿಕೆ ದೂರನ್ನು ರಾತ್ರಿ 2-30 ಗಂಟೆ ಸಮಯದಲ್ಲಿ ನೀಡಿರುತ್ತೇನೆ ಎಂದರೆ ಸರಿ.

12. ಅದೇ ರೀತಿ ಫ್ರಾಸಾ-2/ಚಾಸಾ.3 ಶಿಲ್ಪಾ ರವರು ವಿಚಾರಣೆಗೆ ಒಳಪಟ್ಟಿದ್ದು ನೊಂದ ಸಾಕ್ಷಿಯಾಗಿದ್ದು, ಚಾಸಾ-1 ತನ್ನ ಗಂಡ, ದಿಃ05.08.2012 ರಂದು ಆರೋಪಿತರು ಮತ್ತು ತಮ್ಮ ನಡುವೆ ನಲ್ಲಿ ಗುಂಡಿಯ ವಿಚಾರದಲ್ಲಿ ಗಲಾಟೆ ನೆಡೆದಿರುತ್ತದೆ, 1 ನೇ ಆರೋಪಿಯು ಚಾಸಾ-1 ರ ತಲೆಯ ನೆತ್ತಿಯ ಭಾಗಕ್ಕೆ ಕುಡಗೋಲಿನಿಂದ ಹೊಡೆದಿರುತ್ತಾರೆ. ಸದರಿ ಗಲಾಟೆಯಲ್ಲಿ ಚಾಸಾ-3 ರವರ ಸರವನ್ನು ಕಿತ್ತುಕೊಂಡಿರುತ್ತಾರೆ. ದಿಃ 06.08.2012 ರಂದು ಬೆಳಿಗ್ಗೆ ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇವೆ. ಸದರಿ ಗಲಾಟೆಯಲ್ಲಿ

ಆರೋಪಿತರು 1 ರಿಂದ 3 ನೇ ಆರೋಪಿತರು ತನಗೆ ಕಣಿಗೆಯಿಂದ ಹೊಡೆದಿರುತ್ತಾರೆ. ಚಾಸಾ-3 ರವರು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ ಈ ಸಂಬಂಧ ತಾನು ಪೊಲೀಸರಿಗೆ ತನ್ನ ಹೇಳಿಕೆ ನೀಡಿದ್ದೇನೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಪಾಟೀ ಸವಾಲಿನಲ್ಲಿ ಗಲಾಟೆ ರಾತ್ರಿ 8-15 ರ ಸಮಯದಲ್ಲಿ ನಡೆದಿರುತ್ತದೆ ಎಂದರೆ ಸರಿ, ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ-1 ಮತ್ತು 5 ಹಾಗೂ ತನಗೆ ಅವ್ಯಾಚ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿ, ಗಲಾಟೆಯನ್ನು ಬಿಡಿಸಲು ಬಂದ ಚಾಸಾ-4 ಅವರಿಗೂ ಆರೋಪಿತರು ಕೈ ಕಾಲುಗಳಿಂದ ಹೊಡೆದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನು ಎಂದರೆ ಸರಿ, ಜಗಳ ಬಿಡಿಸಲು ಚಾಸಾ-3 ರವರಿಗೆ ಆರೋಪಿತರು ಕೈ ಕಾಲುಗಳಿಂದ ಹೊಡೆದರು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇ ಎಂದರೆ ಸರಿ ಆಗ ಚಾಸಾ-5 ರವರು ಆರೋಪಿತರಿಗೆ ಥೀಮಾರಿ ಹಾಕಿ ಗಲಾಟೆಯನ್ನು ಬಿಡಿಸಿರುತ್ತಾರೆಂದರೆ ಸರಿ ಆರೋಪಿತರು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ ಚಾಸಾ-1, 3 ರವರನ್ನು ಚಾಸಾ-5 ರವರು ಒಂದು ಆಟೋ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿರುತ್ತಾರೆ ಎಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಫ್ರಾಸಾ-3/ಚಾಸಾ-5 ತಿಮ್ಮೆಶಪ್ಪ ರವರು ಪ್ರತ್ಯಕ್ಷ ಸಾಕ್ಷಿ/ಸ್ಥಳ ಮಹಜರ್ ಸಾಕ್ಷಿದಾರರಾಗಿದ್ದು, ಸ್ಥಳ ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಈ ಪ್ರಕರಣದ ವಿಚಾರಗಳಾವವು ತನಗೆ ಗೊತ್ತಿಲ್ಲ ತಾನು ಯಾವುದೇ

ಗಲಾಟೆಯನ್ನು ನೋಡಿಲ್ಲ ಮತ್ತು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ, ಪೋಲೀಸರಿಗೆ ತಾನು ಯಾವುದೇ ಸ್ಥಳ ತೋರಿಸಿಲ್ಲ ಪೋಲೀಸರು ತನ್ನ ಮುಂದೆ ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ, ಈ ಹಂತದಲ್ಲಿ ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿಃ2 ಎಂದು ಮತ್ತು ಪಂಚನಾಮೆಯಲ್ಲಿರುವ ಅವರ ಸಹಿಯನ್ನು ನಿಪಿಃ2 (ಎ)ಎಂದು ಗುರುತಿಸಲಾಗಿರುತ್ತದೆ, ನಿಪಿಃ 2 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ಪೋಲೀಸರು ಅದನ್ನು ಓದಿ ಹೇಳಿಲ್ಲ, ಈ ಸಂಬಂಧ ತಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿದು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ.

14. ಪ್ರಾಸಾ-4/ಚಾಸಾ.3 ಭರತಮ್ಮ ರವರು ವಿಚಾರಣೆಗೆ ಒಳಪಟ್ಟಿದ್ದು ಕಣ್ಣಾರೆ ಕಂಡ ಸಾಕ್ಷಿಯಾಗಿದ್ದು ಪ್ರಕರಣದ ವಿಚಾರಗಳಾವುವು ತನಗೆ ಗೊತ್ತಿಲ್ಲ, ತಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಮತ್ತು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ ಆರೋಪಿತರು ಅವ್ಯಾಚ ಶಬ್ದಗಳಿಂದ ಬೈದಿಲ್ಲ ಮತ್ತು ಕೈ ಕಾಲುಗಳಿಂದ ಹಲ್ಲೆಪಡಿಸಿಲ್ಲ ಹಾಗೂ ಯಾವುದೇ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಈ ಸಂಬಂಧ ತಾನು ಪೋಲಿಸರ ಮುಂದೆ

ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿದು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ.

15. ಫ್ರಾಸಾ–5/ಚಾಸಾ.4 ಧ್ರಾಕ್ಷಾಯಿಣಿ ರವರು ವಿಚಾರಣೆಗೆ ಒಳಪಟ್ಟಿದ್ದು ಪ್ರತ್ಯಕ್ಷ ಹಾಗೂ ನೊಂದ ಸಾಕ್ಷಿದಾರರಾಗಿದ್ದು ದಿನಾಂಕಃ 05.08.2012 ರಂದು ರಾತ್ರಿ 08–15 ಗಂಟೆ ಸಮಯದಲ್ಲಿ 1ನೇ ಆರೋಪಿ ಮತ್ತು ಚಾಸಾ.5 ರವರು ನಲ್ಲಿ ನೀರಿನ ವಿಚಾರವಾಗಿ ಗಲಾಟೆ ಮಾಡುತ್ತಿದ್ದು, ಚಾಸಾ.1 ರವರು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಕುಡಗೋಲಿನಿಂದ ಚಾಸಾ–1 ರವರ ತಲೆಗೆ ಹೊಡೆದಿದ್ದು, ಚಾಸಾ.3 ಮತ್ತು ನಾನು ಗಲಾಟೆ ಬಿಡಿಸಲು ಹೋದಾಗ ನಮಗೂ ಸಹ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಹಲ್ಲೆಪಡಿಸಿರುತ್ತಾರೆ. ನಂತರ ಊರಿನ ಗ್ರಾಮಸ್ಥರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ಚಾಸಾ.1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕುಡಗೋಲನ್ನು ನೋಡಿ ಗುರುತಿಸಿದ್ದು, ಸದರಿ ಕುಡಗೋಲನ್ನು 1ನೇ ಆರೋಪಿಯು ಹಲ್ಲೆ ಮಾಡಿರುತ್ತಾನೆಂದು ನುಡಿದಿದ್ದರ ಮೇರೆಗೆ ಸದರಿ ಕುಡುಗೋಲನ್ನು ಎಂ.ಓ.1 ಎಂದು ಗುರುತಿಸಲಾಯಿತು ಎಂದು ಭಾಗಶಃ ಸಾಕ್ಷ್ಯವನ್ನು ನುಡಿದು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ಪಾಟೀ ಸವಾಲಿನಲ್ಲಿ

ದಿನಾಂಕಃ 05.08.2012 ರಂದು ಆರೋಪಿತರಿಗೂ ಮತ್ತು ಚಾಸಾ-5 ರವರ ಮಧ್ಯೆ ಗಲಾಟೆಯಾಗಿದ್ದು, ಆರೋಪಿತರೆಲ್ಲರೂ ಹಳೇ ವೈಷಮ್ಯದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.1 ರವರಿಗೆ ಸೂಳೇ ಮಗನೇ, ಬೋಳಿ ಮಗನೇ ಎಂದು ಬೈದಾಡಿದ್ದು, 1ನೇ ಆರೋಪಿ ಚಾಸಾ-ರವರ ತಲೆಗೆ ಕುಡಗೋಲಿನಿಂದ ಹೊಡೆದು ರಕ್ತ ಗಾಯಪಡಿಸಿದ್ದನು ಎಂದರೆ ಸರಿ. ಅದನ್ನು ಕಂಡು ತಾನು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ತನಗೂ ಸಹ ಹೊಡೆದಿರುತ್ತಾನೆಂದರೆ ಸರಿ. ಅದನ್ನು ಕಂಡು ಚಾಸಾ-2 ಮತ್ತು 3 ರವರು ಗಲಾಟೆ ಬಿಡಿಸಲು ಬಂದಾಗ ಅವರಿಗೂ ಸಹ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿರುತ್ತಾರೆಂದರೆ ಸರಿ. ಅದನ್ನು ಕಂಡು ಚಾಸಾ-3 ರವರ ಗಂಡ ಆರೋಪಿತರಿಗೆ ಛೀಮಾರಿ ಹಾಕಿ ಗಲಾಟೆ ಬಿಡಿಸಿರುತ್ತಾರೆಂದರೆ ಸರಿ. ಆರೋಪಿತರು ಹೋಗುವಾಗ ನೀವು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೇದರಿಕೆ ಹಾಕಿದ್ದರು ಎಂದರೆ ಸರಿ. ಈ ಸಂಬಂಧ ಪೊಲೀಸರು ತನ್ನನ್ನು ವಿಚಾರಿಸಿದ್ದು, ತಾನು ದಿನಾಂಕಃ 06.08.2012 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

16. ಪ್ರಾಸಾ.6/ಚಾಸಾ-8 ಡಾ.ವಿನಯ್ ಸಿ ಸಜ್ಜನ್., ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ ಸಿರಿಗೆರೆ, ರವರು ದೋ.ಸಾಕ್ಷಿ-2, 3

ರವರಿಗೆ ಪ್ರಥಮ ಚಿಕಿತ್ಸೆ ನೀಡಿ ವೈದ್ಯಕೀಯ ಪರೀಕ್ಷೆ ನಡೆಸಿದ ಬಗ್ಗೆ ಸಾಕ್ಷ್ಯ ನುಡಿಯುತ್ತಾರೆ. ದಿನಾಂಕ 06-08-2012 ರಂದು ಸಂಜೆ 04-30 ಗಂಟೆಯ ಸಮಯದಲ್ಲಿ ತಾನು ತುರ್ತ ಚಿಕಿತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ-2 ರವರು ಹಲ್ಲೆಯ ಹಿನ್ನಲೆಯಲ್ಲಿ ತನ್ನ ಸಮಕ್ಷಮ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಕುತ್ತಿಗೆಯ ಹಿಂಭಾಗದಲ್ಲಿ ನೋವಿನ ಅನುಭವ ಇತ್ತು ಎಡ ಮೊಣಕೈಯ ಮೇಲೆ 2*1 ಸೆಂ ಮೀಟರ್ ತರಚಿದ ಗಾಯ ಇತ್ತು, ಎಡ ಕಿರುಬೆರಳಿನ ಮೇಲೆ ತರಚಿದ ಗಾಯ ಇತ್ತು, ಈ ಮೇಲ್ಕಂಡ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ನ್ಯಾಯಾಲಯದ ಮುಂದಿರುವ ಮು.ಮಾ-1 ರ ಕುಡುಗೋಲಿನ ಹಿಂಭಾಗ ತಗುಲಿದ್ದಲ್ಲಿ ಮೇಲ್ಕಂಡ ಗಾಯಗಳು ಎರ್ಪಡುವ ಸಾಧ್ಯತೆ ಇದೆ. ಅದೇ ದಿನ ಸಂಜೆ 4-30 ಗಂಟೆಯ ಸಮಯದಲ್ಲಿ ತಾನು ತುರ್ತು ಚಿಕಿತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ-3 ರವರು ಹಲ್ಲೆಯ ಹಿನ್ನಲೆಯಲ್ಲಿ ತನ್ನ ಸಮಕ್ಷಮ ಹಾಜರಾಗಿದ್ದು ಅವರನ್ನು ಪರೀಕ್ಷಿಸಲಾಗಿ ಕುತ್ತಿಗೆಯ ಹಿಂಭಾಗದಲ್ಲಿ 20*0.5 ಸೆಂ ಮೀಟರ್ ತರಚಿದ ಗಾಯ ಇದ್ದು ಕೊರಳ ಚೈನನ್ನು ಎಳೆದಾಗ ಆಗಿರುವ ಸಾಧ್ಯತೆ ಇದೆ ಕುತ್ತಿಗೆ ಹಿಂಭಾಗ ಮತ್ತು ತೊಡೆಯ ಭಾಗದಲ್ಲಿ ನೋವಿನ ಅನುಭವ ಇತ್ತು. ಈ ಮೇಲ್ಕಂಡ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ನ್ಯಾಯಾಲಯದ ಮುಂದಿರುವ ಮು.ಮಾ-01 ಕುಡುಗೋಲಿನಿಂದ ಹಲ್ಲೆ ಮಾಡಿದಾಗ ಮತ್ತು ಕೈ ಕಾಲಿನಿಂದ

ಹೊಡೆದಾಡಿದಾಗ ಆಗುವ ಸಾಧ್ಯತೆ ಇರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಫ್ರಾಸಾ.7/ಚಾಸಾ-6 ರಾಜಪ್ಪ ರವರು ವಿಚಾರಣೆಗೆ ಒಳಪಟ್ಟಿದ್ದು ಸ್ಥಳ ಮಹಜರ್ ಸಾಕ್ಷಿದಾರರಾಗಿದ್ದು, ನಿಪಿ-2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು 2012 ನೇ ಸಾಲಿನಲ್ಲಿ ಪೋಲಿಸರು ಮಹಜರ್ ನ್ನು ಮಾಡಲು ಬಂದಿದ್ದಾಗ ಮಾಡಿದ್ದು ಮಹಜರ್ ನ್ನು ಮಾಡಲು ಸ್ಥಳವನ್ನು ಯಾರು ತೋರಿಸಿದರು ಎಂದು ಗೊತ್ತಿಲ್ಲ, ಮಹಜರ್ ನ್ನು ಬೆಳಿಗ್ಗೆ 10-00 ಗಂಟೆಗೆ ಮಾಡಿದ್ದರು ನ್ಯಾಯಾಲಯಾದ ಮುಂದೆ ಇರುವ ಮುದ್ದೆ ಮಾಲು-1 ನ್ನು ಈ ಹಿಂದೆ ನೋಡಿಲ್ಲ ಎಂದು ನುಡಿದಿದ್ದು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಮಾನ್ಯ ಸಹಾಯಕ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದು, ತನ್ನ ಪಾಟೀ ಸವಾಲಿನಲ್ಲಿ ದಿನಾಂಕ 06/08/2012 ರಂದು ಚಾಸಾ-8 ರವರ ಮನೆಯಲ್ಲಿ ಚಾಸಾ-5 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-7 ರ ಸಮಕ್ಷಮ ಬೆಳಿಗ್ಗೆ 10-00 ರಿಂದ 10-45 ರವರೆಗೆ ಮಹಜರ್ ಮಾಡಿರುತ್ತಾರೆ, ನಾನು ಮತ್ತು ಚಾಸಾ-7 ರವರು ಸಹಿ ಮಾಡಿರುವುದು ಎಂದು ಹೇಳಿರುತ್ತಾರೆ.

17. ಫ್ರಾಸಾ-8/ಚಾಸಾ-10 ಸತ್ಯನಾರಾಯಣರೆಡ್ಡಿ, ಎಎಸ್ಐ, ರವರು ಹೊಳಲ್ಕೆರೆ ಪೋಲಿಸ್ ಠಾಣೆ ರವರು ಭಾಗಶಃ

ತನಿಖಾಧಿಕಾರಿಯಾಗಿದ್ದು, ದಿನಾಂಕಃ 06-08-2012 ರಂದು ರಾತ್ರಿ 2-15 ರ ಸಮಯದಲ್ಲಿ ತಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಸಾರ್ವಜನಿಕ ಆಸ್ಪತ್ರೆ ಹೊಳಲ್ಕೆರೆ ರವರಿಂದ ಬಂದಂತಹ ಮೆಮೋವನ್ನು ಪಡೆದುಕೊಂಡು ಆಸ್ಪತ್ರೆಗೆ ಭೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡು ಬಂದು ಆರೋಪಿತರ ವಿರುದ್ದ ಠಾಣಾ ಮೊಕದ್ದಮೆ ಸಂ.339/2012 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಮಾಡಿದ್ದು, ಅದೇ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-5 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10-00 ರಿಂದ 10-45 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿದ್ದು ಸದರಿ ಸಮಯದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮುದ್ದೇ ಮಾಲು-1 ರ ಕುಡುಗೋಲನ್ನು ಅಮಾನತ್ತುಪಡಿಸಿಕೊಂಡು ಮುದ್ದೇ ಮಾಲನ್ನು ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಪ್ರಕರಣದ ಕಡತವನ್ನು ಚಾಸಾ-11 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆಸ್ಪತ್ರೆಯಿಂದ ಮೆಮೋ ವನ್ನು ನಿಪಿ-7 ಎದು ಗುರುತಿಸಲಾಗಿದ್ದು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಿದ್ದು ಅದೇ ರೀತಿ ಹೇಳಿಕೆಯಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1(ಬಿ) ಎಂದು ಪ್ರಥಮ ವರ್ತಮಾನ ವರದಿ ಯನ್ನು

ನಿಪಿ–8 ಎಂದು ಸಹಿ ಗುರುತಿಸಲಾಗಿರುತ್ತದೆ.

18. ಫ್ರಾಸಾ–9/ಚಾಸಾ–11 ಬಿ.ಗಿರೀಶ್. ಪಿಎಸ್‌ಐ, ಹೊಳಲ್ಕೆರೆ ಪೋಲಿಸ್ ಠಾಣೆ ರವರು ಅಂತಿಮ ತನಿಖಾಧಿಕಾರಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಕಡತವನ್ನು ಚಾಸಾ–10 ರವರಿಂದ ಪಡೆದುಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿ ಅದೇ ದಿನ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಿಂದ ಚಾಸಾ–1 ರಿಂದ 3 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದ್ದು, ಆರೋಪಿತರ ವಿರುದ್ಧ ಆರೋಪ ರುಜುವಾತದ ಹಿನ್ನಲೆಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿದ್ದು, ನಿಪಿ–5,ನಿಪಿ–6 ಮತ್ತು ನಿಪಿ–9 ರಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ.

19. ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ ಒಟ್ಟು 11 ಸಾಕ್ಷಿಗಳ ಪೈಕಿ 9 ಸಾಕ್ಷಿದಾರರುಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ.1, ರಿಂದ 6, 8, 10, 11 ರವರನ್ನು ಫ್ರಾಸಾ–1 ರಿಂದ ಫ್ರಾಸಾ–9 ರಂತೆ ಸಾಕ್ಷಿದಾರರುಗಳ ಹೇಳಿಕೆಯನ್ನು ಪಡೆದಿದ್ದು, ನಿಪಿ.1 ರಿಂದ ನಿಪಿ.9 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ಮು.ಮಾ.1 ನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ–1 ದೂರು (ಹೇಳಿಕೆ) ನಿಪಿ–2 ಸ್ಥಳ

ಮಹಜರ್, ನಿಪಿ–3 ಚಾಸಾ–5 ರವರ ಹೇಳಿಕೆ, ನಿಪಿ–4 ಚಾಸಾ–3 ರವರ ಹೇಳಿಕೆ, ನಿಪಿ–5 ಮತ್ತು 6 ಗಾಯದ ಪ್ರಮಾಣ ಪತ್ರಗಳು, ನಿಪಿ–7 ಆಸ್ಪತ್ರೆಯಿಂದ ಬಂದಂತಹ ನಿವೇದನೆ, ನಿಪಿ–8 ಪ್ರಥಮ ವರ್ತಮಾನ ವರದಿ, ನಿಪಿ–9 ಚಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ಅಭಿಯೋಜನೆಯು ತಮ್ಮ ಪ್ರಕರಣದ ಪುಷ್ಟಿಕರಣಕ್ಕೆ ಗುರುತಿಸಿಕೊಂಡಿರುತ್ತದೆ.

20. ಈ ಮೇಲ್ಕಂಡ ಅಭಿಯೋಜನೆಯ ಸಾಕ್ಷಿ ವಿಚಾರಣೆ ವೇಳೆಯಲ್ಲಿ ಆರೋಪಿತರ ಮೇಲೆನ ರುಜುವಾತಗಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ನಿಪಿ–1 ರಿಂದ ನಿಪಿ–9 ರ ದಾಖಲೆಗಳನ್ನು ಕೂಲಕುಂಷವಾಗಿ ಪರಿಶೀಲಿಸಿದ್ದು, ಮೇಲ್ಕಂಡ ಮೌಖಿಕ ಮತ್ತು ಲಿಖಿತ ಸಾಕ್ಷ್ಯಧಾರಗಳನ್ನು ಆರೋಪಿತರ ಮೇಲಿನ ಆರೋಪವನ್ನು ರುಜುವಾತುಪಡಿಸಲು ಪೂರಕ ಮತ್ತು ಸುಸಂಬದ್ಧ ದಾಖಲೆಗಳಾಗಿರುತ್ತವೆಂಬುದನ್ನು ಕಂಡುಬರವುದು ಅಗತ್ಯವಾಗಿರುತ್ತದೆ. ಮೇಲಿನ ಸಾಕ್ಷಿದಾರರ ಹೇಳಿಕೆಗಳಲ್ಲಿ ಫ್ರಾಸಾ–1 ರವರ ಹೇಳಿಕೆಯು ಆರೋಪಿತರ ಮೇಲಿನ ಆರೋಪ ರುಜುವಾತು ಬಹುಮುಖ್ಯವಾಗಿರುತ್ತದೆಯಾದರೂ ಪೂರಕ ವಾಗಿರುತ್ತದೆಯೇ ಎಂಬುದನ್ನು ನೋಡುವುದಾದರೇ ಫ್ರಾಸಾ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ

1ನೇ ಆರೋಪಿ ತನ್ನ ಬಟ್ಟೆ ಹರಿದು ಕುಡುಗೋಲಿನಿಂದ ತಲೆಗೆ ಹೊಡೆದಿರುತ್ತಾನೆ ಬಿಡಿಸಲು ಬಂದ ಚಾಸಾ-4 ರವರಿಗೂ ಬೆನ್ನಿಗೆ ಹೊಡೆದಿರುತ್ತಾನೆಂದು ಹೇಳಿಕೆ ನೀಡಿದ್ದು, ನಿಪಿ-1 ದೂರು ಹೇಳಿಕೆಯನ್ನು ಗಮನಿಸಿದಾಗ ಆಸ್ಪತ್ರೆಯಲ್ಲಿ ಹೇಳಿಕೆ ನೀಡುವ ಸಂದರ್ಭದಲ್ಲಿ ಕೂಡಲಿಯಿಂದ ಹಲ್ಲೆ ಮಾಡಿರುತ್ತಾರೆಂದು ಹೇಳಿಕೆಯನ್ನು ನೀಡಿದ್ದು, ಗ್ರಾಮೀಣ ಪ್ರದೇಶದ ಜಿರಾಯ್ತಿ (ರೈತ) ವ್ಯಕ್ತಿಯಿಂದ ಕೊಡಲಿಗೂ ಕುಡುಗೋಲಿಗೂ ವ್ಯತ್ಯಾಸ ಗೊತ್ತಿಲ್ಲವೆಂದು ಊಹಿಸಲು ಸಾಧ್ಯವಿರುವುದಿಲ್ಲ ದೂರಿನ ಪ್ರಕಾರ ಕೊಡಲಿ ಎಂದು ನಮೂದಿಸಿದ್ದು, ವಿಚಾರಣೆ ವೇಳೆ ತಮ್ಮ ಹೇಳಿಕೆಯಲ್ಲಿ ಕುಡುಗೋಲು ಎಂದು ಹೇಳಿಕೆ ನೀಡಿರುವುದು ಹಾಗೂ ತನಿಖೆಯಲ್ಲಿ ಕುಡುಗೋಲು ಎಂದು ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿದ್ದು ಅನುಸ್ವಾದವಾಗಿದ್ದು, ಈ ಬಗ್ಗೆ ತನಿಖಾಧಿಕಾರಿ ಅಂತಿಮ ತನಿಖೆಯಲ್ಲಿ ಯಾವುದೇ ವಿವರಣೆ ನೀಡಿರುವುದಿಲ್ಲ, ಆದ್ದರಿಂದ ಗಲಾಟೆಯಾಗಿರುವ ಹಾಗೂ ಆರೋಪಿತರು ಮು.ಮಾ-1 ನ್ನು ಬಳಸಿ ಗಲಾಟೆ ವೇಳೆ ಹಲ್ಲೆ ಮಾಡಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ, ಅನುಮಾನದಿಂದ ಕೂಡಿದ್ದು ಅನುಕೂಲತೆ ಆರೋಪಿತರ ಪರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ.

ಮುಂದುವರೆದು 2ನೇ ಆರೋಪಿ ಪಾಲು ವಿಭಾಗ ಕೋರಿ ತನ್ನ

ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. 1ನೇ ಮತ್ತು 2ನೇ ಆರೋಪಿತರ ನಡುವೆ ಅಷ್ಟಾಗಿ ವಿಶ್ವಾಸ ಇಲ್ಲವೆಂದು ಒಪ್ಪಿಕೊಂಡಿದ್ದು, 1 ಮತ್ತು 2ನೇ ಆರೋಪಿತರು ಮತ್ತು ದೂರುದಾರರ ನಡುವೆ ಸಿವಿಲ್ ವ್ಯಾಜ್ಯ ಮತ್ತು ಈ ಹಿಂದಯೇ ವೈಷ್ಯಮ್ಯ ಇರುವುದು ಕಂಡುಬಂದಿರುತ್ತದೆ.

21. ಫ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರು ನಲ್ಲಿ ಕಿತ್ತು ಹಾಕಿದ್ದಾರೆಂದು ನಾನು ಸಂಬಂಧಪಟ್ಟ ಪಂಚಾಯಿತಿಯವರಿಗೆ ದೂರು ಸಲ್ಲಿಸಿರುವುದಿಲ್ಲ ದಿನಾಂಕ 08-05-2012 ರಂದು ರಾತ್ರಿ 1-45 ರ ಸಮಯದಲ್ಲಿ ತಾನು ಆರೋಪಿತರಿಗೆ ಹೊಡೆದಿರುತ್ತೇನೆಂದು ಅವರು ನನ್ನ ವಿರುದ್ಧ ದೂರನ್ನು ಸಲ್ಲಿಸಿದ್ದಾರೆಂದರೆ ಸರಿ ಎಂದು ಒಪ್ಪಿಕೊಂಡಿದ್ದು, ಸದರಿ ಪ್ರಕರಣ ಸಂಖ್ಯೆ 1026/2020 ರಂತೆ ಆಗಿದೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ ಈ ಅಂಶವನ್ನು ಗುಮನಿಸಿದಾಗ ಆರೋಪಿತರು ಮತ್ತು ದೂರುದಾರರು ಪರಸ್ಪರ ವಿರುದ್ಧ ದೂರು ದಾಖಲಾಗಿರುವುದು ಕಂಡುಬಂದಿರುತ್ತದೆ.

ಮುಂದುವರೆದ ಪಾಟೀ ಸವಾಲಿನಲ್ಲಿ ಗಲಾಟೆಯಾದ ದಿನ ಅಲ್ಲಿ ಎಷ್ಟು ಜನ ಸೇರಿದ್ದರು ಎಂದು ನಾನು ಹೇಳಲಾಗುವುದಿಲ್ಲ, ಕತ್ತಲು ಆಗಿತ್ತು ಎಂದರೆ ಸರಿ ಯಾವ ಆರೋಪಿ ಯಾವ ದಿಕ್ಕಿನಿಂದ ಬಂದಿರುತ್ತಾರೆಂದರೆ ಹೇಳಲಾಗುವುದಿಲ್ಲ ಎಂದರೆ ಸರಿ ಗಲಾಟೆಯಲ್ಲಿ ಹರಿದಿದ್ದ ಷರ್ಟನ್ನು ನಾನು

ಪೋಲಿಸರಿಗೆ ನೀಡಿಲ್ಲ ನಾನು ಆಸ್ಪತ್ರೆಗೆ ಯಾವ ವಾಹನದಲ್ಲಿ ಹೋಗಿರುತ್ತೇನೆ ಎಂಬುದು ತನಗೆ ಗೊತ್ತಿಲ್ಲ, ತಲೆಗೆ ಪೆಟ್ಟು ರಕ್ತ ಬಂದಿದ್ದು, ರಕ್ತದ ಕಲೆಗಳು ತನ್ನ ಷರ್ಟ ಗೆ ಆಗಿರುತ್ತದೆ ಎಂದು ಹೇಳಿರುತ್ತಾರೆ, ಈ ಹಂತದಲ್ಲಿ ವೈದ್ಯರ ಹೇಳಿಕೆಯನ್ನು ಗಮನಿಸಿದಾಗ ಫ್ರಾಸಾ-1 ರವರು ವೈದ್ಯರ ಬಳಿ ಚಿಕಿತ್ಸೆ ಪಡೆದಿರುವ ಬಗ್ಗೆ ಹೇಳಿಕೆ ನೀಡಿರುವುದಿಲ್ಲ ಈ ಬಗ್ಗೆ ವೈದ್ಯರ ವೈದ್ಯಕೀಯ ಪ್ರಮಾಣ ಪತ್ರ ಇರುವುದಿಲ್ಲ ಆದ್ದರಿಂದ ಫ್ರಾಸಾ-1 ರವರು ಆ ದಿನ ಹಲ್ಲೆ ಆಗಿತ್ತು ಎಂದು ತೋರ್ಪಡಿಸಲು ಪೂರಕವಾದ ದಾಖಲೆ ಇಲ್ಲದಿರುವ ಕಾರಣ ಸಾಕ್ಷಿಯ ಮೌಖಿಕ ಹೇಳಿಕೆಯು ನಂಬಲರ್ಹವಾಗಿರುವುದಿಲ್ಲ. ಅದೇ ರೀತಿ ಫ್ರಾಸಾ-3 ರವರು ಈ ಪ್ರಕರಣದಲ್ಲಿ ಕಣ್ಣಾರೆ ಕಂಡ ಸಾಕ್ಷಿ ಹಾಗೂ ಇವರ ನಲ್ಲಿಯ ಮೂಲಕವೇ ದೂರುದಾರರು ನಲ್ಲಿಯ ಸಂಪರ್ಕ ಹೊಂದಲು ಪೈಪ್ ನ್ನು ಅಳವಡಿಸಿಕೊಳ್ಳಲು ಗುಂಡಿಯನ್ನು ತೆಗೆಯುತ್ತಿದ್ದರು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಫ್ರಾಸಾ-3 ರವರು ತಮ್ಮ ವಿಚಾರಣೆ ವೇಳೆ ನಾನು ಯಾವುದೇ ಗಲಾಟೆ ನೋಡಿಲ್ಲ ಗಲಾಟೆಯನ್ನು ಬಿಡಿಸಿಲ್ಲ ನನ್ನ ಮತ್ತು ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿಲ್ಲ ಎಂದು ಪ್ರತಿಕೂಲ ಸಾಕ್ಷಿದಾರರಾಗಿದ್ದು ಆರೋಪಿತರು ನಲ್ಲಿ ಅಳವಡಿಸುವ ವೇಳೆ ದೂರುದಾರರಿಗೆ ಅಡ್ಡಿ ಮಾಡಿ ಹಲ್ಲೆ ಮಾಡಿರುತ್ತಾರೆಂದು ಪೂರಕವಾದ ಸಾಕ್ಷ್ಯಧಾರಗಳು ಇರುವುದಿಲ್ಲ. ಒಂದು ವೇಳೆ ದೂರುದಾರರು ಫ್ರಾಸಾ-3 ರವರ ಮನೆಯ ಮೂಲಕ ಅಥವಾ ಅವರು ಹೊಂದಿದ್ದ ನಲ್ಲಿ ಸಂಪರ್ಕದಿಂದ

ನಲ್ಲಿಯ ಸಂಪರ್ಕವನ್ನು ಮುಂದುವರೆಸುವ ಪ್ರಯತ್ನಿಸಿದ್ದ ಪಕ್ಷದಲ್ಲಿ ಫ್ರಾಸಾ–3 ರವರು ಈ ಬಗ್ಗೆ ಪೂರಕ ಸಾಕ್ಷ್ಯ ನುಡಿಯುತ್ತಿದ್ದರೂ ಆದ್ದರಿಂದ ಫ್ರಾಸಾ–1 ರವರ ಮೌಖಿಕ ಹೇಳಿಕೆಯಲ್ಲಿ ಸಾಕಷ್ಟು ವ್ಯತಿರಿಕ್ತತೆ ಇದ್ದು, ಸುಸಂಬದ್ಧ ಸಾಕ್ಷ್ಯ ಇಲ್ಲವೆಂಬುದು ಕಂಡುಬಂದಿರುತ್ತದೆ. ಆದ್ದರಿಂದ ಈ ಸಾಕ್ಷ್ಯ ಹೇಳಿಕೆಯು ನಂಬಲರ್ಹವಾಗಿರುವುದಿಲ್ಲ.

22. ಫ್ರಾಸಾ–2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಗಲಾಟೆ ವೇಳೆ 1ನೇ ಆರೋಪಿ ಚಾಸಾ–1 ರವರಿಗೆ ತಲೆಯ ನೆತ್ತಿ ಭಾಗಕ್ಕೆ ಕುಡುಗೋಲಿನಿಂದ ಹೊಡೆದಿರುತ್ತಾರೆ, ಚಾಸಾ–3 ರವರ ಸರವನ್ನು ಕಿತ್ತುಕೊಂಡಿರುತ್ತಾರೆ, ಹಾಗೂ ತನಗೆ ಕಣಿಗೆಯಿಂದ ಹೊಡೆದಿರುತ್ತಾರೆಂದು ಹೇಳಿಕೆ ನೀಡಿದ್ದು, ಹಾಗೂ ವ್ಯಾಚ ಶಬ್ದಗಳಿಂದ ಬೈದಿರುತ್ತಾರೆ, ಹಲ್ಲೆ ಮಾಡಿರುತ್ತಾರೆಂದು ಚಾಸಾ–5 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆಂದು ಹೇಳಿಕೆ ನೀಡಿದ್ದು, ಚಾಸಾ–5 ಫ್ರಾಸಾ–5 ರವರ ಹೇಳಿಕೆಯನ್ನು ಗಮನಿಸಿದಾಗ ಚಾಸಾ–5 ರವರು ಫ್ರಾಸಾ–3 ರಂತೆ ವಿಚಾರಗಣೊಳಪಟ್ಟಿದ್ದು ನಾನು ಯಾವುದೇ ಗಲಾಟೆ ನೋಡಿಲ್ಲ, ಯಾವುದೇ ಗಲಾಟೆ ಬಿಡಿಸಿಲ್ಲ, ಪೋಲಿಸರಿಗೆ ನಾನು ಯಾವುದೇ ಸ್ಥಳವನ್ನು ತೋರಿಸಲು ಪೋಲಿಸರು ನನ್ನ ಮುಂದೆ ಯಾವುದೇ ಪಂಚನಾಮೆ ಕ್ರಮವನ್ನು ಜರುಗಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು

ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿ ಸಂಪೂರ್ಣ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಅಭಿಯೋಜನೆಯ ಪ್ರಕರಣಕ್ಕೆ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದಾಗಲೂ ಪೂರಕವಾಗಿ ಹೇಳಿಕೆ ನೀಡಿರುವುದಿಲ್ಲ. ಆದ್ದರಿಂದ ಆ ದಿನ ಚಾಸಾ-5 ರವರು ಬಂದು ಗಲಾಟೆ ನಡೆದಿತ್ತು ಎಂಬ ಬಗ್ಗೆ ಗಲಾಟೆ ಬಿಡಿಸಿರುತ್ತಾರೆಂಬುದು ಸ್ಪಷ್ಟತೆ ಇರುವುದಿಲ್ಲ.

23. ಫ್ರಾಸಾ-2 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರಿಗೂ ಮತ್ತು ನಮಗೂ ಮೊದಲಿನಿಂದಲೂ ಮಾತುಕತೆ ಇಲ್ಲ ಎಂದರೆ ಸರಿ ನಲ್ಲಿ ಗುಂಡಿ ತೆಗೆಸಲು ಪರವಾನಗಿ ಪಡೆದಿರುವುದಿಲ್ಲ ಎಂದು ಒಪ್ಪಿಕೊಂಡಿದ್ದು, ಪರವಾನಗಿ ಇಲ್ಲದೇ ನಲ್ಲಿ ಗುಂಡಿ ತೆಗೆಸಲು ಸಾಧ್ಯವೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ, ಆದೇ ರೀತಿ ನಲ್ಲಿ ಗುಂಡಿ ತೆಗೆಸುವ ಕೆಲಸವನ್ನು ಪಂಚಾಯಿತಿಯಿಂದ ಮಾಡಿಸುತ್ತಾರೆ ಎಂದರೆ ಸರಿ ಎಂದು ಒಪ್ಪಿಕೊಂಡಿದ್ದು, ನಲ್ಲಿ ಗುಂಡಿ ತೆಗೆಯಲು ಆರೋಪಿತರು ಪ್ರಯತ್ನಿಸಿರುವುದಿಲ್ಲ ಎಂದು ಕಂಡುಬಂದಿರುತ್ತದೆ.

ಮುಂದುವರೆದು 1ನೇ ಆರೋಪಿ ಚಾಸಾ-5 ರವರ ವಿರುದ್ಧ ಪ್ರಕರಣ ಸಂಖ್ಯೆ 1017/2020 ಪ್ರಕರಣವು ಇದೇ ನ್ಯಾಯಾಯದಲ್ಲಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ ಎಂದು ಒಪ್ಪಿಕೊಂಡಿದ್ದು, 2ನೇ ಆರೋಪಿಯು ನಮ್ಮ

ವಿರುದ್ಧ ಪಾಲು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ತಮ್ಮ ಮನೆಯ ಅಕ್ಕ–ಪಕ್ಕದಲ್ಲಿ ವಾಸದ ಮನೆಗಳಿವೆ ಎಂದರೆ ಸರಿ. ಅಕ್ಕ ಪಕ್ಕದ ಮನೆಯವರ ಹೆಸರು ಹೇಳಲಾಗುವುದಿಲ್ಲ ಸ್ಥಳದ ಚೆಕ್ಕು ಬಂದಿ ಹೇಳಲಾಗುವುದಿಲ್ಲ ಕಣೆಗೆಯಿಂದ ಹೊಡೆದಿರುತ್ತಾರೆ ಎನ್ನುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆಂದು ಹೇಳಿದ್ದು ತಮ್ಮ ಮುಖ್ಯ ವಿಚಾರಣೆಯ ವೇಳೆ ಹೇಳಿಕೆ ನೀಡಿರುವ ಎಲ್ಲೂ ಉಲ್ಲೇಖ ಇರುವುದಿಲ್ಲ ಅದೇ ರೀತಿ ದೂರನ್ನು ಗಮನಿಸಿದಾಗ ಆರೋಪಿತರು ಕಣೆಗೆಯಿಂದ ಹಲ್ಲೆ ಮಾಡಿರುವ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ, ಅದೇ ರೀತಿ ಚಾಸಾ–1 ರವರಿಗೆ ನೆತ್ತಿಯ ಮೇಲೆ ಹಲ್ಲೆ ಮಾಡಿದ್ದರಿಂದ ಚಾಸಾ–1 ರವರ ಷರ್ಟಗೆ ರಕ್ತದ ಕಲೆ ಆಗಿರುತ್ತದೆ ಎಂಬ ಹೇಳಿಕೆ ನೀಡಿದ್ದು, ಈ ಬಗ್ಗೆ ರಕ್ತದ ಕಲೆಯಾಗಿದ್ದ ಷರ್ಟ್ ನ್ನು ಅಮಾನತ್ತುಪಡಿಸಿಕೊಂಡಿಲ್ಲ, ಸದರಿ ಷರ್ಟ್ ನ್ನು ನಾನು ಪೋಲಿಸರಿಗೆ ನೀಡಿಲ್ಲ, ಫ್ರಾಸಾ–1 ರವರಿಗೆ ರಕ್ತದ ಕಲೆಯಾಗಿತ್ತು ಎಂದು ತೋರಿಸಲು ನಿಪಿ–9 ಗಾಯದ ಪ್ರಮಾಣ ಪತ್ರವನ್ನು ಅಭಿಯೋಜನೆಯು ಗುರುತಿಸಿಕೊಂಡಿದ್ದು, ನಿಪಿ–9 ರ ಪ್ರಕಾರ ತರಚಿದ ಗಾಯ ಎಂದು ನಮೂದಿಸಿದ್ದು, ರಕ್ತಗಾಯ ಎಂದು ನಮೂದಿಸಿರುವುದಿಲ್ಲ ಆದ್ದರಿಂದ ಈ ಸಾಕ್ಷಿಯ ಹೇಳಿಕೆ ನಂಬಲರ್ಹವಾಗಿರುವುದಿಲ್ಲ ಹಾಗೂ ಆರೋಪಣೆಗೆ ಪೂರಕವಾಗಿರುವುದಿಲ್ಲ.

24. ಪ್ರಾಸಾ–3 ತಿಮ್ಮೇಶ್ ರವರು ನಿಪಿ–2 ಪ್ರತ್ಯಕ್ಷ ಸಾಕ್ಷಿ ಹಾಗೂ ಗಲಾಟೆ ಬಿಡಿಸಿದ್ದು, ಸ್ಥಳ ಮಹಜರ್ ಕಾಲದಲ್ಲಿ ಹಾಜರಿದ್ದ ಸಾಕ್ಷಿಯಾಗಿದ್ದು, ತಮ್ಮ ವಿಚಾರಣೆ ವೇಳೆ ಗಲಾಟೆಯನ್ನು ನೋಡಿಲ್ಲ ಯಾವುದೇ ಗಲಾಟೆ ಬಿಡಿಸಿಲ್ಲ ಪೋಲಿಸರಿಗೆ ಸ್ಥಳವನ್ನು ತೋರಿಸಿಲ್ಲ ಎಂದು ಪ್ರತಿಕೂಲ ಸಾಕ್ಷಿ ನುಡಿದಿದ್ದು ಅಭಿಯೋಜನೆಗೆ ಪೂರಕರವಾದ ಸಾಕ್ಷ್ಯವಾಗಿರುವುದಿಲ್ಲ, ಈ ಸಾಕ್ಷಿಯ ವಿಚಾರಣೆ ಅಭಿಯೋಜನೆಗೆ ಅನುಕೂಲಕಾರವಾಗಿರುವುದಿಲ್ಲ. ಮುಂದುವರೆದು ಪ್ರಾಸಾ–4 ರವರು ಈ ಪ್ರಕರಣದಲ್ಲಿ ಗಲಾಟೆ ಸಂದಬರ್ದಲ್ಲಿ ಹಾಜರಿದ್ದ ಸಾಕ್ಷಿ ಎಂದು ವಿಚಾರಣೆಗೊಳಪಡಿಸಿದ್ದು, ಈ ಪ್ರಕರಣದ ವಿಚಾರ ಗೊತ್ತಿಲ್ಲ, ಗಲಾಟೆ ನೋಡಿಲ್ಲ, ಗಲಾಟೆ ಬಿಡಿಸಿಲ್ಲ ಆರೋಪಿತರು ಅವ್ಯಾಚ ಶಬ್ದಗಳಿಂದ ಬೈದಿಲ್ಲ, ಮತ್ತು ಕೈ ಕಾಲುಗಳಿಂದ ಹಲ್ಲೆ ಮಾಡಿಲ್ಲ ಆರೋಪಿತರು ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದು, ಅಭಿಯೋಜಕರವರ ಪಾಟೀ ಸವಾಲಿನಲ್ಲೂ ಸಹಾ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಉತ್ತರಿಸಿರುವುದಿಲ್ಲ. ಆದ್ದರಿಂದ ಈ ಸಾಕ್ಷಿಯ ವಿಚಾರಣೆಯು ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲಕರವಾಗಿರುವುದಿಲ್ಲ.

25. ಪ್ರಾಸಾ–5 ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಹಾಗೂ ಗಲಾಟೆ ಬಿಡಿಸಲು ಹೋದಂತಹ ಸಾಕ್ಷಿಯಾಗಿದ್ದು, ತಮ್ಮ ವಿಚಾರಣೆ ವೇಳೆ

1ನೇ ಆರೋಪಿ ಕುಡುಗೋಲಿನಿಂದ ಚಾಸಾ-1 ರವರರಿಗೆ ಹಲ್ಲೆ ಮಾಡಿದ ಬಗ್ಗೆ ಚಾಸಾ-3 ಮತ್ತು ನಾನು ಗಲಾಟೆ ಬಿಡಿಸಲು ಹೋದಾಗ ನಮಗೂ ಸಹಾ ಕೈ ಕಾಲುಗಳಿಂದ ಹೊಡೆದು ಹಲ್ಲೆಪಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಅಭಿಯೋಜಕರ ಪಾಟೀ ಸವಾಲಿನಲ್ಲಿ 1ನೇ ಆರೋಪಿ ಕುಡುಗೋಲಿನಿಂದ ಚಾಸಾ-1 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿದನು ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ, ಹಾಗೂ ಚಾಸಾ-2 ಮತ್ತು 3 ರವರಿಗೂ ಸಹಾ ಹೊಡೆದಿರುತ್ತಾರೆಂದರೆ ಸರಿ ಎಂದು ಅದನ್ನು ಕಂಡು ಚಾಸಾ-3 ರವರು ಗಲಾಟೆಯನ್ನು ಕಂಡು ಛೀಮಾರಿ ಹಾಕಿ ಜಗಳ ಬಿಡಿಸಿರುತ್ತಾರೆಂದು ಹೇಳಿಕೆ ನೀಡಿದ್ದು, ಚಾಸಾ-3 ರವರು ವಿಚಾರಣೆ ವೇಳೆ ಪ್ರಕರಣದ ವಿಚಾರಗಳು ಗೊತ್ತಿಲ್ಲ ನಾನು ಗಲಾಟೆ ನೋಡಿಲ್ಲ, ಯಾವುದೇ ಗಲಾಟೆಯನ್ನು ಬಿಡಿಸಿಲ್ಲವೆಂದು ಹೇಳಿಕೆ ನೀಡಿದ್ದು, ಫ್ರಾಸಾ-5 ರವರ ಹೇಳಿಕೆ ಎಷ್ಟು ನಂಬಲರ್ಹ ಎಂದು ಪ್ರಶ್ನೆಯಾಗಿರುತ್ತದೆ, ಕಾರಣ ಚಾಸಾ-3 ರವರು ಗಲಾಟೆ ನೋಡಿಲ್ಲ ಎಂದು ಹೇಳಿದ್ದು, ಗಲಾಟೆ ಮಾಡಿರುತ್ತಾರೆಂಬ ಬಗ್ಗೆ ಫ್ರಾಸಾ-5 ರವರ ಹೇಳಿಕೆಗೆ ಫ್ರಾಸಾ-4 ರವರ ಹೇಳಿಕೆ ಪೂರಕವಾಗಿರುವುದಿಲ್ಲ. ಆದ್ದರಿಂದ ಹೇಳಿಕೆ ನಂಬರ್ಲಹವಾಗಿರುವುದಿಲ್ಲ.

ಮುಂದುವರೆದು ಆರೋಪಿತರು ಚಾಸಾ-1 ಮತ್ತು ಚಾಸಾ-5 ರವರ

ವಿರುದ್ಧ ಪಾಲು ವಿಭಾಗವನ್ನು ಕೋರಿ ಅಸಲು ದಾವೆ 164/2011 ರಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿ, ಮತ್ತು 1ನೇ ಆರೋಪಿ ಚಾಸಾ-1 ಮತ್ತು 3, 5 ರವರ ವಿರುದ್ಧ ಪ್ರಕರಣ ಸಂಖ್ಯೆ ಸಿಸಿ ನಂ 1026/2020 ರಂತೆ ದೂರು ದಾಖಲಿಸಿರುತ್ತಾರೆಂದರೆ ಸರಿ ಎಂದು ಒಪ್ಪಿಕೊಂಡಿದ್ದು ಈ ಹಿಂದಿನಿಂದಲೂ ಆರೋಪಿತರು ಮತ್ತು ದೂರುದಾರರ ನಡುವೆ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಇದ್ದು ಪರಸ್ಪರ ದೂರು ಪ್ರತಿ ದೂರುಗಳು ಇರುವುದು ವೈಷ್ಯಮ್ಯ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಮುಂದುವರೆದು ಪಾಟೀ ಸವಾಲಿನಲ್ಲಿ ನೀರಿನ ನಲ್ಲಿ ಪೈಪ್ ಲೈನ್ ಹಾಕಿಸುವ ಕಾಲಕ್ಕೆ ಗ್ರಾಮ ಪಂಚಾಯಿತಿಯವರು ಯಾರು ಬಂದಿರುವುದಿಲ್ಲ, ಚಾಸಾ-5 ರವರು ನಲ್ಲಿ ನೀರಿಗಾಗಿ ಪರವಾನಗಿ ಪಡೆದುಕೊಂಡಿರುತ್ತಾರೋ ಇಲ್ಲವೂ ನನಗೆ ಗೊತ್ತಿಲ್ಲ, ಗಲಾಟೆ ಸಮಯದಲ್ಲಿ 100 ರಿಂದ 150 ಜನರು ಇದ್ದು ಯಾರು ಸಹಾ ಗಲಾಟೆಯನ್ನು ಬಿಡಿಸಲು ಬಂದಿರುವುದಿಲ್ಲ, ಅವರ ಹೆಸರು ಹೇಳಲಾಗುವುದಿಲ್ಲ, ಗಲಾಟೆಯಾದ ಸ್ಥಳದ ಚೆಕ್ಕು ಬಂದಿ ಹೇಳಲಾಗುವುದಿಲ್ಲ ಎಂದು ಹೇಳಿಕೆ ನೀಡಿದ್ದು, ದೂರನ್ನು ಗಮನಿಸಿದ್ದಾಗ್ಯೂ ಈ ಸಾಕ್ಷಿಯು ಸ್ಥಳದಲ್ಲಿ ತಾನು ಹಾಜರಿದ್ದೇ ಎಂದು ಹೇಳಿದ್ದು ಗ್ರಾಮಸ್ಥರು 100 ರಿಂದ 150 ಜನರು ಇದ್ದು ಯಾರು ಸಹಾ ಗಲಾಟೆ ಬಿಡಿಸಲು ಬಂದಿರುವುದಿಲ್ಲ ಗಲಾಟೆಯಾದ ಸ್ಥಳದ ಚೆಕ್ಕು ಬಂಧಿ ಹೇಳಲಾಗುವುದಿಲ್ಲ

ಎಂದು ಹೇಳಿರುವುದನ್ನು ಗುಮನಿಸಿದಾಗ ಅದೇ ಊರಿನವರಾಗಿದ್ದು ಗಲಾಟೆಯಾದ ಸ್ಥಳದ ಚೆಕ್ಕು ಬಂಧಿ ಹೇಳದೇ ಇರುವುದರಿಂದ ಈ ಸಾಕ್ಷಿ ಸ್ಥಳದಲ್ಲಿ ಇದ್ದ ಪಕ್ಷದಲ್ಲಿ ಚೆಕ್ಕು ಬಂಧಿ ತಿಳಿಯುತ್ತಿತ್ತು ಆದ್ದರಿಂದ ಈ ಸಾಕ್ಷಿಯು ಸ್ಥಳದಲ್ಲಿ ಇರುವುದಿಲ್ಲ ಎಂದು ಊಹಿಸಬಹುದಾಗಿರುತ್ತದೆ.

ಮುಂದುವರೆದು ಚಾಸಾ-1 ರವರಿಗೆ ಹಲ್ಲೆ ಮಾಡಿದಾಗ ಅವರ ಅಂಗಿಯನ್ನು ತೊಟ್ಟಿದ್ದು, ಅವರ ಬಟ್ಟೆ ಮತ್ತು ನನ್ನ ಸೀರೆ ರಕ್ತ ಕಲೆಯಾಗಿದ್ದವು ಎಂದು ಹೇಳಿದ್ದು ನಿಪಿ-9 ನ್ನು ಗುಮನಿಸಿದಾಗ ರಕ್ತ ಸೋರುತ್ತಿರುವ ಅಥವಾ ರಕ್ತ ಗಾಯಗಳು ಇರುವ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಇಲ್ಲದೇ ಇರುವುದು ಈ ಸಾಕ್ಷಿಯು ಪ್ರಕರಣಕ್ಕೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಉತ್ರೇಪಕ್ಷೆಯಾಗಿ ಸಾಕ್ಷಿಯನ್ನು ನುಡಿದಿರುತ್ತಾರೆಂದು ಕಂಡು ಬಂದಿರುತ್ತದೆ. ಆದ್ದರಿಂದ ಈ ಸಾಕ್ಷಿಯ ಹೇಳಿಕೆಯು ನಂಬರ್ಲಹವಾಗಿರುವುದಿಲ್ಲ.

26. ಫ್ರಾಸಾ-6 ರವರು ಈ ಪ್ರಕರಣದಲ್ಲಿ ವೈದ್ಯಾರಾಗಿದ್ದು ಚಾಸಾ-2, 3 ಪರಿಕ್ಷೀಸಿದ ವೈದ್ಯಾರಾಗಿದ್ದು, ಚಾಸಾ-2 ರವರಿಗೆ ತರಚಿದ ಗಾಯ ಕಂಡು ಬಂಂದಿರುವ ಬಗ್ಗೆ ಚಾಸಾ-3 ರವರಿಗೆ ತರಚಿದ ಗಾಯ ಕಂಡು ಬಂದಿರುವ ಬಗ್ಗೆ ಹೇಳಿಕೆ ನೀಡಿದ್ದು, ತಮ್ಮ ಪಾಟೀ ಸವಾಲಿನಲ್ಲಿ ಗಾಯದ ವಯಸ್ಸಿನ ಕುರಿತು ಉಲ್ಲೇಖ ಮಾಡಿಲ್ಲ, ಎತ್ತಿನ ಬಂಡಿಯ ಮೇಲೆ

ಹೋಗುವಾಗ ಒರಟಾದ ಪ್ರದೇಶದಲ್ಲಿ ಬಿದ್ದಾಗ ಈ ರೀತಿ ಗಾಯಗಳು ಅಗುವ ಸಂಭವ ಇರುತ್ತದೆ ಎಂದು ಒಪ್ಪಿಕೊಂಡಿದ್ದು ಒಂದು ವೇಳೆ ಹಲ್ಲೆಯಿಂದ ಗಾಯಗಳಾದ ಪಕ್ಷದಲ್ಲಿ ರಕ್ತ ಹೆಪ್ಪು ಗಟ್ಟುವಿಕೆ ಹಾಗೂ ತೀವ್ರ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ದೂರಿನಲ್ಲಿ ಕೊಡಲಿನಿಂದ ಹಲ್ಲೆ ಮಾಡಲಾಗಿರುತ್ತದೆ ಎಂದು ಹೇಳಲಾದ ಒಂದು ವೇಳೆ ಕೊಡಲಿಯಿಂದ ಹಲ್ಲೆ ಮಾಡಿದ ಸಂದರ್ಭದಲ್ಲಿ ತೀವ್ರ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇದ್ದು, ಗಾಯದ ಪ್ರಮಾಣದ ಪತ್ರದಲ್ಲಿ ನಮೂದಿಸಿರುವ ಗಾಯಗಳಿಗೂ ಪ್ರಕರಣದಲ್ಲಿ ಹೇಳಲಾದ ಕೊಡಲಿ ಅಮಾನತ್ತುಪಡಿಸಿಕೊಳ್ಳಲಾದ ಕುಡುಗೋಲಿಗೂ ಒಂದಕ್ಕೊಂದು ಸಾಮ್ಯತೆ ಇಲ್ಲದೇ ಇರುವುದರಿಂದ ಕುಡಗೋಲಿನಿಂದ ಅಥವಾ ಕೊಡಲಿಯಿಂದ ಗಾಯಗಳಾಗಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಆದ್ದರಿಂದ ನಿಪಿ-5, 6 ಮತ್ತು 9 ಹಾಗೂ ವೈದ್ಯರ ಹೇಳಿಕೆಗೂ ಸಾಮ್ಯತೆ ಇಲ್ಲದೇ ಇರುವುದರಿಂದ ವೈದ್ಯರ ಹೇಳಿಕೆಯು ಪರಿಗಣನಾರ್ಹವಾಗಿರುವುದಿಲ್ಲ.

27. ಫ್ರಾಸಾ-7 ರವರು ರಾಜಪ್ಪ ರವರು ನಿಪಿ-2 ರ ಸ್ಥಳ ಮಹಜರ್ ಸಾಕ್ಷಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆ ವೇಳೆ ಸ್ಥಳವನ್ನು ಯಾರು ತೋರಿಸಿದರು ಗೊತ್ತಿಲ್ಲ ಮು.ಮಾ-01 ನ್ನು ಈ ಹಿಂದೆ ನೋಡಿರುವುದಿಲ್ಲ, ಎಂದು ಹೇಳಿದ್ದು ಅಭಿಯೋಜಕರ ಪಾಟೀ ಸವಾಲಿನಲ್ಲಿ ಮಹಜರ್ ನ್ನು

10–00 ರಿಂದ 10–45 ರವರೆಗೆ ಬರೆದಿರುತ್ತಾರೆಂದು ಸಹಿ ಮಾಡಿರುತ್ತೇನೆಂದು ಹೇಳಿದ್ದು ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ಆರೋಪಿತರ ವಕೀಲರ ಪಾಟೀ ಸವಾಲಿನಲ್ಲಿ ಹೇಳಿಕೆಯನ್ನು ನೀಡಿದ್ದು, ಈ ಸಾಕ್ಷ್ಯ ಹೇಳಿಕೆಯು ಪ್ರಕರಣಕ್ಕೆ ಪೂರಕವಾಗಿರುವುದಿಲ್ಲ. ಫ್ರಾಸಾ–9 ರವರು ಈ ಪ್ರಕರಣದಲ್ಲಿ ಚಾಸಾ–10 ರವರಿಂದ ಕಡತವನ್ನು ಪಡೆದುಕೊಂಡು ಗಾಯದ ಪ್ರಮಾಣ ಪತ್ರ ಸ್ವೀಕರಿಸಿಕೊಂಡು ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿದ ತನಿಖಾಧಿಕಾರಿಯಾಗಿದ್ದು, ಕುಡುಗೋಲಿನಿಂದ ಹಲ್ಲೆ ಮಾಡಿರುವ ಕುರಿತು ನಿಪಿ–1 ರಲ್ಲಿ ಕೊಡಲಿಯಿಂದ ಎಂದು ಉಲ್ಲೇಖ ಇದೆ ಎಂದು ಒಪ್ಪಿಕೊಂಡಿದ್ದು, ಕೊಡಲಿಯಿಂದ ಹಲ್ಲೆ ಮಾಡಲಾಯಿತೇ ಅಥವಾ ಕುಡುಗೋಲಿನಿಂದ ಹಲ್ಲೆ ಮಾಡಲಾಯಿತೇ ಎಂಬ ಬಗ್ಗೆ ಸೂಕ್ತ ತನಿಖೆ ಮಾಡಿ ಧೃಡಪಡಿಸಿಕೊಳ್ಳದೇ ಆರೋಪಿತರ ವಿರುದ್ದ ಆರೋಪ ಪಟ್ಟಿಯನ್ನು ಸಲ್ಲಿಸಿರುವುದು ಕಂಡುಬಂದಿದ್ದು, ತನಿಖೆಯಲ್ಲಿ ಹಲ್ಲೆ ಮಾಡಲು ಉಪಯೋಗಿಸಿದ ಆಯುದದ ಬಗ್ಗೆ ನಿಖರತೆ ಇಲ್ಲದೇ ಅಂತಿಮ ವರದಿಯನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ, ಆದ್ದರಿಂದ ಯಾವ ಆಯುಧ ಉಪಯೋಗಿಸಲಾಯಿತು ಎಂಬ ಬಗ್ಗೆ ಅನುಮಾನ ವ್ಯಕ್ತವಾಗುತ್ತಿದ್ದು, ಅನುಮಾನದ ಅನುಕೂಲತೆ ಆರೋಪಿತರ ಪರವಾಗಿ ಕಂಡಬಂದಿರುತ್ತದೆ. ಫ್ರಾಸಾ–8 ರವರು ಈ ಪ್ರಕರಣದಲ್ಲಿ ಘಟನಾ ದಿನಂದು ಹೊಳಲ್ಕೆರೆ ಸಾರ್ವಜನಿಕ

ಆಸ್ಪತ್ರೆಯಿಂದ ಬಂದಂತಹ ಮೆಮೋ ವನ್ನು ಪಡೆದುಕೊಂಡು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡು ಪ್ರಕರಣ ದಾಖಲಿಸಿರುವ ಬಗ್ಗೆ ಹಾಗೂ ಸ್ಥಳಕ್ಕೆ ಭೇಟಿ ನೀಡಿ ಕುಡುಗೋಲನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ.

28. ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ನಿಪಿ-1 ನ್ನು ಚಾಸಾ-1 ರವರು ಬರೆದುಕೊಟ್ಟಿರುತ್ತಾರೆ, ನಿಪಿ-1 ರಲ್ಲಿ ಕುಡುಗೋಲು ಎಂದು ನಮೂದು ಇಲ್ಲ ಎಂದರೆ ಸರಿ, ನಿಪಿ-1 ರಲ್ಲಿ ಕೊಡಲಿ ಎಂದು ನಮೂದು ಇದೆ ಎಂದು ಒಪ್ಪಿಕೊಂಡಿದ್ದು, ಈ ಸಾಕ್ಷಿಯು ದೂರದಾಖಲಿಸಿಕೊಂಡಿದ್ದು ಪ್ರಥಮ ವರ್ತಮಾನ ವರದಿ ದಾಖಲಿಸಿ ಸ್ಥಳಕ್ಕೆ ಸ್ಥಳ ಮಹಜರ್ ಕ್ರಮ ಜರುಗಿಸಲು ಹೋದಂತಹ ಪೋಲಿಸ್ ಅಧಿಕಾರಿಯಾಗಿದ್ದು ಸ್ಥಳ ಮಹಜರ್ ವೇಳೆ ಕುಡುಗೋಲನ್ನು ಅಮಾನತ್ತುಪಡಿಸಿಕೊಂಡಿದ್ದು, ದೂರಿನಲ್ಲಿ ಕೊಡಲಿ ಎಂದು ಉಲ್ಲೇಖ ಇದ್ದು ದೂರಿಗೆ ಮತ್ತು ಅಮಾನತ್ತು ವೇಳೆ ಕುಡುಗೋಲನ್ನು ಹಾಜರುಪಡಿಸಿದಾಗ ಅಥವಾ ಸ್ಥಳದಲ್ಲಿದ್ದ ಬಗ್ಗೆ ದೂರದಾರರನ್ನಾಗಲೀ, ಅಥವಾ ಹಲ್ಲೆಗೊಳಗಾದ ನೊಂದ ವ್ಯಕ್ತಿಗಳಾನ್ನಾಗಲೀ ಪ್ರಶ್ನಿಸಿರುವುದಿಲ್ಲ ಹಾಗೂ ಮಹಜರ್ ನಲ್ಲಿಯೂ ಸಹಾ ಕುಡುಗೋಲನ್ನು ಹಾಜರುಪಡಿಸಿದ್ದು ಎಂದು ಉಲ್ಲೇಖ ಇದ್ದು ಸ್ಥಳದಲ್ಲಿ ದೂರರನ್ನಾಗಲೀ, ಅಥವಾ ನೊಂದ ವ್ಯಕ್ತಿಗಳನ್ನಾಗಲೀ ಹಲ್ಲೆ ಮಾಡಲು

ಉಪಯೋಗಿಸಿದ್ದ ಕೊಡಲಿ ಅಥವಾ ಕುಡುಗೋಲುನ್ನಾಗಲೀ ಉಪಯೋಗಿಸಿದ ಬಗ್ಗೆ ಯಾವ ಒಬ್ಬ ವ್ಯಕ್ತಿಯ ಹೇಳಿಕೆಗಳನ್ನು ಹಾಗೂ ಮರು ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಈ ಬಗ್ಗೆ ದೂರುದಾರರನ್ನಾಗಲೀ ನೂಂದ ವ್ಯಕ್ತಿಗಳನ್ನಾಗಲೀ ಪ್ರಥಮ ವರ್ತಮಾನ ವರದಿ ದಾಖಲಿಸಿಕೊಂಡ ಪೋಲಿಸ್ ಅಧಿಕಾರಿಯಾಗಲೀ ಅಥವಾ ತನಿಖೆ ಮಾಡಿದ ಪೋಲಿಸ್ ಅಧಿಕಾರಿಯಗಾಲೀ ಸ್ಪಷ್ಟೀಕರಣ ನೀಡಿರುವುದಿಲ್ಲ. ಆದ್ದರಿಂದ ಅಭಿಯೋಜನೆಯ ಪ್ರಕರಣವು ಹಲ್ಲೆ ಮಾಡಿದ ಆಯುದದ ಬಗ್ಗೆ ಸ್ಪಷ್ಟಿಕರಣ ಇಲ್ಲದೇ ಇದ್ದು ಯಾವುದೇ ಸ್ವತಂತ್ರ ಸಾಕ್ಷಿಗಳು ಅಭಿಯೋಜನೆಯ ಪ್ರಕರಣಕ್ಕೆ ಉತ್ತರಿಸದೇ ಇದ್ದು ವೈದ್ಯೆರ ಹೇಳಿಕೆಯು ಮತ್ತು ಹಲ್ಲೆ ಮಾಡಲು ಉಪಯೋಗಿಸಿದ ಆಯುದದ ಬಗ್ಗೆ ಹಾಗೂ ಗಾಯದ ಪ್ರಮಾಣ ಪತ್ರ ನಿಪಿ-5,6 ಮತ್ತು 9 ರಲ್ಲಿನ ಗಾಯಗಳು ಸಾಮಾನ್ಯ ಸ್ವರೂಪದ ತರಚಿದ ಗಾಯಗಳಾಗಿದ್ದು ಕೊಡಲಿ ಅಥವಾ ಕುಡುಗೋಲಿನಿಂದ ಆಗಿರುತ್ತವೇ ಎಂಬ ಸಷ್ಟತೆ ಇಲ್ಲದೇ ಇರುವುದರಿಂದ ಹಾಗೂ ಗಾಯದ ವಯಸ್ಸು ನಮೂದು ಮಾಡದೇ ಇರುವುದರಿಂದ ಮೇಲ್ಕಂಡ ನಿಪಿ-5, 6 ಮತ್ತು 9 ರಲ್ಲಿ ಗಾಯಗಳು ಗಲಾಟೆಯಾದ ಸಂದರ್ಭದಲ್ಲಿ ಆಗಿರುತ್ತವೆಂಬ ಬಗ್ಗೆ ಪೂರಕ ಪೂರಾವೆಗಳಿರುವುದಿಲ್ಲ ಹಾಗೂ ಪ್ರಾಸಾ-1 ರವರು ರಕ್ತಗಾಯಗಳಾಗಿತ್ತು ಎಂದು ಹೇಳಿದ್ದು ಪ್ರಾಸಾ-5 ರವರು ಪ್ರಾಸಾ-1 ರವರಿಗೆ ರಕ್ತಗಾಯಗಳಾಗಿದ್ದು ಅವರು ಧರಿಸಿದ್ದ ಷರ್ಟ ಮತ್ತು ನಾನು ಧರಿಸಿದ್ದ ಸೀರೆ

ಗೂ ರಕ್ತಸಿಕ್ತವಾಗಿದ್ದವು ಎಂದು ಹೇಳಿದ್ದು,ಪ್ರಾಸಾ-5 ರವರು ಧರಿಸಿದ್ದ ಸೀರೆಯನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ದೂರಿನಲ್ಲಿ ರಕ್ತಗಾಯಗಳು ಆಗಿರುತ್ತವೆಂಬ ಬಗ್ಗೆ ಉಲ್ಲೇಖ ಇಲ್ಲದೇ ಇರುವುದರಿಂದ ಪ್ರಾಸಾ-5 ರವರ ಹೇಳಿಕೆ ಉತ್ತಪ್ರೇಕ್ಷೆಯಾಗಿದ್ದು, ಪ್ರಾಸಾ-1, 2 ಮತ್ತು 5 ರವರ ಹೇಳಿಕೆಯು ಇತರೆ ಸಾಕ್ಷಿದಾರರ ಹೇಳಿಕೆಗೆ ಪೂರಕವಾಗಿರುವುದಿಲ್ಲ. ಆದ್ದರಿಂದ ಮೇಲಿನ ಚರ್ಚೆಯಲ್ಲಿ ಕಂಡುಬಂದಿರುವಂತೆ ಅಮಾನತ್ತು ಮಹಜರ್ ಮತ್ತು ಸ್ಥಳ ಮಹಜರ್ ರುಜುವಾತು ಆಗಿರುವುದಿಲ್ಲ, ಆದೇ ರೀತಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-3, 4 ಪ್ರತಿಕೂಲ ಸಾಕ್ಷಿದಾರರಾಗಿದ್ದು, ಪ್ರಾಸಾ-5 ಉತ್ತಪ್ರೇಕ್ಷೆಯಂತೆ ಸಾಕ್ಷಿಯನ್ನು ನುಡಿದಿರುವುದು ಕಂಡುಬಂದಿರುತ್ತದೆ ಪ್ರಾಸಾ-7 ರವರು ನಿಪಿ-2 ಸ್ಥಳ ಮಹಜರ್ ಸಾಕ್ಷಿಯಾಗಿದ್ದು, ಸಂಪೂರ್ಣ ಪ್ರತಿಕೂಲ ಸಾಕ್ಷಿದಾರಾಗಿದ್ದು, ಒಟ್ಟಾರೆಯಾಗಿ ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸಲು ಪೂರಕ ಸಾಕ್ಷ್ಯದಾರಗಳು ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಆದುದರಿಂದ ಅಭಿಯೋಜನೆಯು ಮೇಲ್ಕಂಡ ಎಲ್ಲಾ ಸಂಶಯ ಮತ್ತು ವಸ್ತು ಸಂಗತಿಯ ವ್ಯತಿರಿಕ್ತತೆಯನ್ನು ಹೊರತುಪಡಿಸಿಯೂ ಅಭಿಯೋಜನೆಯು ಆರೋಪಿತರ ವಿರುದ್ಧ, ಆರೋಪಿಸಿರುವ ಅಪರಾಧವನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣ ವಿಫಲವಾಗಿರುತ್ತದೆ ಎಂದು ಕಂಡುಬಂದಿರುತ್ತದೆ. ಆದುದರಿಂದ **ಅಂಶ 1 ರಿಂದ 7 ಅನ್ನು ನಕಾರಾತ್ಮಕವಾಗಿ ಈ ನ್ಯಾಯಾಲಯವು**

**ಉತ್ತರಿಸಿರುತ್ತದೆ.**

**29. ಅಂಶ 8:–**ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

ಆದೇಶ

ದಂ.ಪ್ರ.ಸಂ.ಕಲಂ.248(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಾ.ದಂ.ಸಂ.ಕಲಂ 143, 147, 148, 504, 323, 324, 504, 506 ಸಹಕಲಂ 149 ರ ಅಡಿಯಲ್ಲಿ ಮಾಡಲಾದ ಆರೋಪಗಳಿಗೆ ಆರೋಪಿ–1 ರಿಂದ 6 ರವರುಗಳನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಿರುತ್ತೇನೆ.

ಆರೋಪಿ ಸಂಖ್ಯೆ:1 ರಿಂದ 6 ಇಂದಿನಿಂದ ಸ್ವತಂತ್ರರಿರುತ್ತಾರೆ.

ಸಿ.ಆರ್.ಪಿ.ಸಿ ಕಲಂ.437–ಎ ಅಡಿಯಲ್ಲಿ ಪಡೆದಿರುವ ಜಾಮೀನು ಮುಚ್ಚಳಿಕೆಯು ಈ ದಿನಾಂಕದಿಂದ 6 ತಿಂಗಳ ಕಾಲ ಚಾಲ್ತಿಯಲ್ಲಿರುತ್ತದೆ. ಮಾಲುಪಟ್ಟಿ ಸಂಖ್ಯೆ:136/2012 ರ ದಿನಾಂಕ 06/08/2012 ರಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಮು.ಮಾ–1 ಮರದ ಹಿಡಿ ಇರುವ ಒಂದು ಕಬ್ಬಿಣದ

ಕುಡುಗೋಲು ನ್ನು ಅಪೀಲು ಸಮಯದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

(ಶೀಘ್ರಲಿಪಿಗಾರರಿಗೆ ಗಣಕೀಕೃತ ಯಂತ್ರದ ಮೇಲೆ ನೇರವಾಗಿ ಉಕ್ತಲೇಖನಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ಸಹಿ ಮಾಡಿ ನಂತರ ದಿನಾಂಕ 20 ನೇ ಜೂನ್ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ

ಅನುಬಂಧ

**ಅಭಿಯೋಜನ ಪಕ್ಷದ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿ:**

| | | |
|---|---|---|
| ಪ್ರಾ.ಸಾ–1 | : | ದೇವೇಂದ್ರಪ್ಪ |
| ಪ್ರಾ.ಸಾ–2 | : | ಶಿಲ್ಪಾ |
| ಪ್ರಾ.ಸಾ–3 | : | ತಿಮ್ಮೇಶಪ್ಪ |
| ಪ್ರಾ.ಸಾ–4 | : | ಭರತಮ್ಮ |
| ಪ್ರಾ.ಸಾ–5 | : | ಧ್ರಾಕ್ಷಾಯಿಣಿ |
| ಪ್ರಾ.ಸಾ–6 | : | ಡಾಃ ವಿನಯ್ ಸಿ ಸಜ್ಜನ್ |
| ಪ್ರಾ.ಸಾ–7 | : | ರಾಜಪ್ಪ |
| ಪ್ರಾ.ಸಾ–8 | : | ಸತ್ಯನಾರಾಯಣರೆಡ್ಡಿ |

**ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ: ಇಲ್ಲಾ –**

**ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿ:**

| | | |
|---|---|---|
| ನಿಪಿ–1 | : | ದೂರು, |
| ನಿಪಿ–1(ಎ) | : | ಪ್ರಾ.ಸಾ–1 ರವರ ಸಹಿ, |
| ನಿಪಿ–2 | : | ಕೃತ್ಯ ನಡೆದ ಸ್ಥಳ ಪಂಚನಾಮೆ, |
| ನಿಪಿ–2(ಎ) | : | ಪ್ರಾ.ಸಾ–3 ರವರ ಸಹಿ, |
| ನಿಪಿ–2(ಬಿ) | : | ಪ್ರಾ.ಸಾ–7 ರವರ ಸಹಿ, |
| ನಿಪಿ–2(ಸಿ) | : | ಪ್ರಾ.ಸಾ–8 ರವರ ಸಹಿ, |
| ನಿಪಿ–3 | : | ಪ್ರಾ.ಸಾ–3 ರವರ ಹೇಳಿಕೆ, |

| | | |
|---|---|---|
| ನಿಪಿ–4 | : | ಫ್ರಾಸಾ–4 ರವರ ಹೇಳಿಕೆ, |
| ನಿಪಿ–5 | : | ಫ್ರಾಸಾ–2 ರವರ ಗಾಯದ ಪ್ರಮಾಣ ಪತ್ರ, |
| ನಿಪಿ–6 | : | ಫ್ರಾಸಾ–4 ರವರ ಗಾಯದ ಪ್ರಮಾಣ ಪತ್ರ, |
| ನಿಪಿ–6 (ಎ) | : | ಫ್ರಾಸಾ–6 ರವರ ಸಹಿ |
| ನಿಪಿ–7 | : | ಆಸ್ಪತ್ರೆಯ ಮೆಮೋ, |
| ನಿಪಿ–7(ಎ) | : | ಫ್ರಾಸಾ–6 ರವರ ಸಹಿ |
| ನಿಪಿ–8 | : | ಪ್ರಥಮ ವರ್ತಮಾನ ವರದಿ, |
| ನಿಪಿ–8(ಎ) | : | ಫ್ರಾಸಾ–8 ರವರ ಸಹಿ, |
| ನಿಪಿ–9 | : | ಗಾಯದ ಪ್ರಮಾಣ ಪತ್ರ, |
| ನಿಪಿ–9(ಎ) | : | ಫ್ರಾಸಾ–6 ರವರ ಸಹಿಯಾಗಿರುತ್ತದೆ. |

**ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ಮುದ್ದೆ ಮಾಲುಗಳ ಪಟ್ಟಿ:**

(1) ಮರದ ಹಿಡಿ ಇರುವ ಒಂದು ಕಬ್ಬಿಣದ ಕುಡುಗೋಲು

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ

HANUMANTHARAYAPPA B R

Digitally signed by HANUMANTHARAYAPPA B R
Date: 2026.06.22 17:03:17 +0530